ಆ)	ಹಾಗಿದ್ದಲ್ಲಿ, ಈವರ್ಷ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಸಹಾಯಧನ ವಿತರಣೆಯಗಿದೆ , ಇಲ್ಲದಿದ್ದಲ್ಲಿ, ಯಾವ ಹಂತದಲ್ಲಿದೆ (ವಿವರ ಒದಗಿಸುವುದು)	೨೦೦೬-೦೭ ನೇ ಸಾಲಿನಲ್ಲಿ ಇದುವರೆಗೆ ೧೧೦ ಜನ ಫಲಾನುಭವಿಗಲಿಗೆ ಸಹಾಯಧನ ವಿತರಣೆಯಾಗಿದೆ ಇನ್ನೂ ೧೦೦ ಅರ್ಜಿದಾರರ ತಾಕುಗಲ ಪರಿಶೀಲನೆ ಮಾಲಾಗುತ್ತಿದ್ದು ಅರ್ಹ ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಗುವುದು
ಇ)	ಸಹಾಯಧನವನ್ನು ಎಷ್ಟು ಕಾಲವಧಿಯೊಳಗೆ ವಿತರಣೆ ಮಾಡಲಾಗುವುದು?	ಮಾರ್ಚ್ ೨೦೦೭ ರ ಅಂತ್ಯದೊಳಗೆ ವಿತರಣೆ ಮಾಡಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೬೦ (೨೧೫೧)

ಸದಸ್ಯರ ಹೆಸರು ಶ್ರೀ ನರಸಿಂಹ ಸ್ವಾಮಿ ಜೆ (ದೊಡ್ಡಬಳ್ಳಾಪುರ)

ಉತ್ತರಿಸುವ ಸಚಿವರು ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಆಹಾರಧಾನ್ಯಗೆಳ ?????? ಬಿಪಿಎಲ್ ಪಡಿತರ ಚೀಟಿ ಪಡೆಯಲು	ಫೆಬ್ರವರಿ ೨೦೦೭ ರ ಮಾಹೆಯಿಂದ ರಾಜ್ಯಾದ್ಯಂತ ಅಕ್ಷಯ ಪಡಿತರ ಚೀಟಿದಾರರಿಗೆ ಯೂನಿಟ್ ಪದ್ಧತಿ ಅನುಸರಿಸಿ ಆಹಾರಧಾನ್ಯ ಹಂಚಿಕೆ

	ತೊಂದರೆಗೊಳಗಾದ ಗ್ರಾಮಾಂತರ ಪ್ರದೇಶದ ಜನರು ಈಗಾಗಲೇ ನೂತನ ಪಡಿತರ ವ್ಯವಸ್ಥೇಯಲ್ಲಿ ಒಬ್ಬ ವ್ಯಕ್ತಿಗೆ ಕೇವಲ ಯೂನಿಟ್ ಆಧಾರದ ಮೇಲೆ ೪ ಕೆಜಿ ಅಕ್ಕಿ, ೨ ಕೆಜಿ ಗೋಧಿ, ನೀಡುವ ವ್ಯವಸ್ಥೆ ಮಾಡಿರುವುದು ನಿಜವೇ?	ನೀಡುವ ಕ್ರಮ ಜಾರಿಕೆ ತರಲಾಗಿದೆ ಅದರಂತೆ ಗಣಕೀಕೃತ ತಾತ್ಕಾಲಿಕ ಪಡಿತರ ಕೂಪನ್ ಪಡೆದ ರಾಜ್ಯದಲ್ಲಿನ ೫೩,೮೭,೧೦೩ ಕುಟುಂಬಗಳ ಜೊತೆಗೆ ಎಪಿಎಲ್ ಕೂಪನ್ ಪಡೆದು, ಬಿ ಪಿ ಎಲ್ ಪಡಿತರ ಚೀಟಿಗಾಗಿ ಅಹವಾಲು ಸಲ್ಲಿಸಿರುವ ಕುಟುಂಬಗಳಲ್ಲಿ ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹತೆ ಹೊಂದಿದ ರಾಜ್ಯದ ೮೭೦ ಲಕ್ಷ ಕುಟುಂಬಗಳಿಗೆ ಸಹ ಫೆಬ್ರವರಿ ೨೦೦೭ರ ಮಾಹಿಯಿಂದಲೇ ಆಹಾರಧಾನ್ಯವನ್ನು ಯೂನಿಟ್ ಪದ್ದತಿಯಡಿಯಲ್ಲಿ ನೀಡಲಾಗಿದೆ
ಆ)	ಯಾವ ನೀತಿ ನಿರ್ದೇಶನದ ಮೇಲೆ ೪ ಕೆಜಿಯನ್ನು ಯೂನಿಟ್ ಆಗಿ ಪರಿಗಣಿಸಲಗಿದೆ ,	ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ರಾಜ್ಯ ಸರ್ಕಾರವು ಕಳೆದ ೨೦೦೪ನೇ ಸೆಪ್ಟಂಬರ್ ಮಾಹೆಯಿಂದ ೨೫ ಕೆಜಿ ಆಆರಧಾನ್ಯವನ್ನು ವಿತರಿಸುತ್ತಿದೆ ಇದೇ ಪ್ರಮಾಣವನ್ನು ಗರಿಷ್ಟ ಮಿತಿ ೨೫ ಕೆಜಿಯವರೆಗೆ ಒಬ್ಬ ವ್ಯಕ್ತಿಯನ್ನು ಒಂದು ಯೂನಿಟ್ ಎಂದು ಗಣನೆಗೆ ತೆಗೆದುಕೊಂಡು ಹಂಚಿಕೆ ನೀಡಲಾಗಿದೆ
ಇ)	ಈ ಕಂಪ್ಯೂಟರ್ ಗೊಂದಲವನ್ನು	ಸಾರ್ವಜನಿಕರ ಅಹವಾಲುಗಳನ್ನು ನೊಂದಾಯಿಸಿಕೊಳ್ಳಲು ಪ್ರತಿ

	ಸರಿಪಡಿಸಲು ಸರ್ಕಾರದ ಕ್ರಮವೇನು?	ತಾಲ್ಲೂಕು ಕೇಂದ್ರದಲ್ಲಿ ನೊಂದಣಿ ಕೇಂದ್ರಗಳಲ್ಲಿ ಅಹವಾಲುಗಳು ನೊಂದಾಯಿಸಲಾಗಿರುತ್ತದೆ ಅವಧಿ ಮೀರಿ ಸಲ್ಲಿಸುವ ಅಹವಾಲುಗಳನ್ನು ಸ್ಥಳೀಯವಾಗಿ ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಪಂಚಾಯತ್ ಕಛೇರಿಗಳಲ್ಲಿಯೂ ಸಹ ಸ್ವೀಕರಿಸಲು ವ್ಯವಸ್ಥೆ ಮಾಡಲಾಗಿತ್ತು, ಪರಿಶೀಲನೆ ಕಾರ್ಯ ???????? ಹಾಗೂ ವರ್ಗ ಬದಲಾವಣೆಗೆ ಅರ್ಹರಿರುವ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್ಗಳನ್ನು ಮುದ್ರಿಸಿ ನೀಡಲು ಜಿಲ್ಲೆಗಳಿಗೆ ಆದೇಶಿಸಿದೆ ಹೊಸದಾಗಿ ಪಡಿತರ ಚೀಇ ಕೋರಿ ಬಂದ ಅಹವಾಲುಗಳನ್ನು ಮರು ಪರಿಶೀಲಿಸಲು ತಿಳಿಸಿದ, ಅರ್ಹತೆಗನುಗುಣವಾಗಿ ತಾತ್ಕಾಲಿಕ ಪಡಿತರ ಚೀಟಿಯನ್ನು ವಿತರಿಸಲಾಗುವುದು
ಈ	ಯಾವ ಹಂತದಲ್ಲಿದೆ, ಹಾಗಿದ್ದಲ್ಲಿ ಬೇಕಾಗಿರುವ ಕಾಲಾವಧಿಯೆಷ್ಟು?	ನಂತರ ಖಾಯಂ ಪಡಿತರ ಚೀಟಿಯನ್ನು ವಿತರಿಸಲು ಕ್ರಮವಹಿಸಲಾಗುವುದು ಮೇಲ್ಕಂಡ ಕಾರ್ಯಕ್ರಮವನ್ನು ಪೂರೈಸಲು ಕನಿಷ್ಟ ೬ ತಿಂಗಳ ಕಾಲಾವಕಾಶ ಬೇಕಿರುತ್ತದೆ